Prajavani 3/3/2018

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ



ನವ ಕರ್ನಾಟಕ ನಿರ್ಮಾಣಕ್ಕೆ

ಸದಾ ಸಿದ್ಧ ಸರ್ಕಾರ

## ಕುಣಿಗಲ್ ತಾಲ್ಲೂಕಿನಲ್ಲಿ ನೂತನವಾಗಿ ಆರಂಭಿಸುತ್ತಿರುವ ಕಾರ್ಯ ಮತ್ತು ಪಾಲನಾ ವಿಭಾಗ ಕಛೇರಿ ಹಾಗೂ ಉಪವಿಭಾಗ ಕಛೇರಿಗಳ

## ಉದ್ಘಾಟನೆ ಮತ್ತು

## ಕುಣಿಗಲ್ ತಾಲ್ಲೂಕಿನಲ್ಲಿ HVDS ಯೋಜನೆಯ

# ಶಂಕುಸ್ಥಾಪನಾ ಸಮಾರಂಭ

ಮಾನ್ಯ ಇಂಧನ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್ ಅವರಿಂದ

**ದಿನಾಂಕ** : 03-03-2018 **ಸಮಯ** : ಸಂಜೆ 4.00 ಗಂಟೆಗೆ **ಸ್ಥಳ** : ಅಮೃತೂರು



ಮಾನ್ಯ ಇಂಧನ ಸಚಿವರಾದ ಶ್ರೀ ಡಿ.ಕೆ. ಶಿವಕುಮಾರ್ ಗ್ರಾಹಕರೊಂದಿಗೆ ಸಮಾಲೋಚಿಸುತ್ತಿರುವುದು

ಉದ್ಘಾಟನೆ
**ಶ್ರೀ ಟಿ.ಬಿ. ಜಯಚಂದ್ರ**
ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು,
ಸಣ್ಣ ನೀರಾವರಿ ಹಾಗೂ ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರು

ಘನ ಉಪಸ್ಥಿತಿ
**ಶ್ರೀ ಡಿ.ಕೆ. ಶಿವಕುಮಾರ್**
ಮಾನ್ಯ ಇಂಧನ ಸಚಿವರು

ಅಧ್ಯಕ್ಷತೆ
**ಶ್ರೀ ಡಿ. ನಾಗರಾಜಯ್ಯ**
ಮಾನ್ಯ ಶಾಸಕರು
ಕುಣಿಗಲ್ ವಿಧಾನಸಭಾ ಕ್ಷೇತ್ರ

ಮುಖ್ಯ ಅತಿಥಿಗಳು

**ಶ್ರೀಮತಿ ಲತಾರವಿಕುಮಾರ್**
ಮಾನ್ಯ ಅಧ್ಯಕ್ಷರು
ಜಿಲ್ಲಾ ಪಂಚಾಯತ್ ತುಮಕೂರು

**ಶ್ರೀ ಡಿ.ಕೆ. ಸುರೇಶ್**
ಮಾನ್ಯ ಲೋಕಸಭಾ ಸದಸ್ಯರು
ಬೆಂಗಳೂರು ಗ್ರಾಮಾಂತರ ಕ್ಷೇತ್ರ

**ಶ್ರೀ ಮುದ್ದಹನುಮೇಗೌಡರು**
ಮಾನ್ಯ ಲೋಕಸಭಾ ಸದಸ್ಯರು
ತುಮಕೂರು ಕ್ಷೇತ್ರ

**ಶ್ರೀ ವಿ.ಎಸ್. ಉಗ್ರಪ್ಪ**
ಮಾನ್ಯ ಶಾಸಕರು
ವಿಧಾನ ಪರಿಷತ್

**ಡಾ. ಜಿ.ಪರಮೇಶ್ವರ್**
ಮಾನ್ಯ ಶಾಸಕರು
ವಿಧಾನ ಪರಿಷತ್






**ಯೋಜನೆಯ ಅನುಕೂಲತೆ :**

- ನೀರಾವರಿ ಪಂಪ್‌ಸೆಟ್ಟುಗಳ ಬಳಕೆದಾರರಿಗೆ ಉತ್ತಮ ಗುಣಮಟ್ಟದ ವೋಲ್ಟೇಜ್ ಲಭ್ಯತೆ ಮತ್ತು ನೀರಾವರಿ ಪಂಪ್‌ಸೆಟ್ಟು ಮೋಟಾರ್‌ಗಳ ವೈಫಲ್ಯ ನಿವಾರಣೆ
- ಅನಧಿಕೃತ ನೀರಾವರಿ ಪಂಪ್‌ಸೆಟ್ಟುಗಳ ಸಂಪರ್ಕಕ್ಕೆ ತಡೆ
- ವಿತರಣಾ ನಷ್ಟದಲ್ಲಿ ಮತ್ತು ಪರಿವರ್ತಕಗಳ ವಿಫಲತೆಯಲ್ಲಿ ಇಳಿಕೆ
- ಎಲ್.ಟಿ. ಮಾರ್ಗ ತುಂಡಾಗಿ ಸಂಭವಿಸಬಹುದಾದ ಅಪಘಾತಗಳ ಗಣನೀಯ ಇಳಿಕೆ

**ಸರ್ವರಿಗೂ ಆದರದ ಸ್ವಾಗತ**

**ಬೆ.ವಿ.ಕಂ. ನ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ**

## ಶರಾವತಿ ವಿದ್ಯುದಾಗಾರದ ನವೀಕೃತ ಅತ್ಯಾಧುನಿಕ ನಿಯಂತ್ರಣ ಕೇಂದ್ರ ಲೋಕಾರ್ಪಣೆ

# ಶರಾವತಿ ನೀರು ಮರು ಬಳಕೆಗೆ ಚಿಂತನೆ: ಡಿಕೆಶಿ

■ ವಿಕ ಸುದ್ದಿಲೋಕ ಶಿವಮೊಗ್ಗ

ಶರಾವತಿ ಕಣಿವೆಯ ಜಲವಿದ್ಯುದಾಗಾರಗಳಲ್ಲಿ ಬಳಸಿಬಿಟ್ಟ ನೀರನ್ನು ಮರು ಬಳಕೆ ಮಾಡಿ ವಿದ್ಯುತ್ ಉತ್ಪಾದಿಸುವಂತಹ ಯೋಜನೆಯ ಕಾರ್ಯಸಾಧ್ಯತೆ ಬಗ್ಗೆ ಸಮೀಕ್ಷೆ ಕೈಗೊಳ್ಳಲಾಗಿದೆ ಎಂದು ಇಂಧನ ಸಚಿವ ಡಿ.ಕೆ.ಶಿವಕುಮಾರ್ ಹೇಳಿದರು.

ಜೋಗ ಸಮೀಪದ ಶರಾವತಿ ವಿದ್ಯುದಾಗಾರದ ನವೀಕೃತ ಅತ್ಯಾಧುನಿಕ ನಿಯಂತ್ರಣ ಕೇಂದ್ರವನ್ನು ಶುಕ್ರವಾರ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಜಲ ವಿದ್ಯುತ್ ಅತಿ ಕಡಿಮೆ ವೆಚ್ಚದಲ್ಲಿ ಲಭ್ಯವಾಗುತ್ತದೆ. ಈಗ ಇರುವ ಸನ್ನಿವೇಶದಲ್ಲಿ ಹೊಸದಾಗಿ ಜಲ ವಿದ್ಯುತ್ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಕಷ್ಟ. ಈ ಹಿನ್ನೆಲೆಯಲ್ಲಿ ಬಳಸಿಬಿಟ್ಟ ಶರಾವತಿ ನದಿ ನೀರನ್ನೇ ಮರುಬಳಕೆ ಮಾಡಿ ವಿದ್ಯುತ್ ಉತ್ಪಾದಿಸಬಹುದಾದ ಸಾಧ್ಯತೆ ಬಗ್ಗೆ ಸಮೀಕ್ಷೆ ನಡೆಸಲು ಕೇಂದ್ರ ಸರಕಾರದ ಏಜೆನ್ಸಿಯೊಂದಕ್ಕೆ ವಹಿಸಲಾಗಿದೆ. ಸಂಸ್ಥೆಯ ವರದಿ ಸಾಧಕ ಬಾಧಕ ನೋಡಿಕೊಂಡು ಅನಂತರದಲ್ಲಿ ಅದರ ಬಗ್ಗೆ ನಿರ್ಧಾರ ಕೈಗೊಳ್ಳಲಾಗುತ್ತದ ಎಂದರು.

**ಸ್ವಾವಲಂಬನೆಯತ್ತ ದಿಟ್ಟ ಹೆಜ್ಜೆ:** ವಿದ್ಯುತ್ ಉತ್ಪಾದನೆಯಲ್ಲಿ ಸಂಪೂರ್ಣ ಸ್ವಾವಲಂಬನೆ ಸಾಧಿಸುವತ್ತ ದೃಢ ಹೆಜ್ಜೆ ಇರಿಸಿರುವ ರಾಜ್ಯವು, ಈ ವರ್ಷದ ಡಿಸೆಂಬರ್ ಅಂತ್ಯದೊಳಗೆ ಅದನ್ನು ಸಾಧಿಸಲಿದೆ. ಪಾವಗಡದಲ್ಲಿ ವಿಶ್ವದ ಅತಿ ದೊಡ್ಡ ಸೋಲಾರ್ ವಿದ್ಯುತ್ ಪಾರ್ಕ್ ಲೋಕಾರ್ಪಣೆ ಮಾಡಲಾಗಿದ್ದು ಬೆಂಗಳೂರು ಯಲಹಂಕದಲ್ಲಿ 1650 ಕೋಟಿ ರೂ. ವೆಚ್ಚದಲ್ಲಿ 375 ಮೆಗಾ ವ್ಯಾಟ್ ಸಾಮರ್ಥ್ಯದ ಅನಿಲ ಆಧಾರಿತ ವಿದ್ಯುತ್ ಉತ್ಪಾದನಾ ಘಟಕ ಒಂದೆರಡು ತಿಂಗಳಲ್ಲಿ ಆರಂಭವಾಗಲಿದೆ. ಕೇಂದ್ರದಿಂದ ಬರುವಂತಹ ಕಲ್ಲಿದ್ದಲು ಪ್ರಮಾಣ ಕಡಿಮೆಯಾಗಿರುವುದರಿಂದ ಸುಮಾರು 900 ಮೆಗಾವ್ಯಾಟ್ ವಿದ್ಯುತ್ ಖರೀದಿ ಮಾಡಲಾಗುತ್ತಿದೆ ಎಂದರು.

ಬೆಂಕಿ ಅನಾಹುತ ಸಂಭವಿಸಿದ ಬಳಿಕ ಕೇವಲ 178 ದಿನಗಳಲ್ಲಿ ಎಲ್ಲ 10 ಘಟಕಗಳು ಕಾರ್ಯಾರಂಭ ಮಾಡಿರುವುದು ದಾಖಲೆಯಾಗಿದೆ. ನಮ್ಮ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಾರ್ಯಕ್ಷಮತೆಗೆ ಇದು ಸಾಕ್ಷಿಯಾಗಿದೆ ಎಂದು ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು. ಕರ್ನಾಟಕ ವಿದ್ಯುತ್ ನಿಗಮದ ಸಂಸ್ಥಾಪನಾ ದಿನವನ್ನು ಮುಂದಿನ ವರ್ಷದಿಂದ ಬೆಂಗಳೂರಿನಿಂದ ಹೊರಗೆ ನಡೆಸಲು ನಿರ್ಧರಿಸಲಾಗಿದೆ. ನಿಗಮದ ಎಲ್ಲ ಸಿಬ್ಬಂದಿ ಹಾಗೂ ಕುಟುಂಬದ ಸದಸ್ಯರು ಜತೆ ಸೇರುವ ಅವಕಾಶ ಇದರಿಂದ ಸಿಗಲಿದೆ ಎಂದರು.

**ಪುತ್ಥಳಿ ಅನಾವರಣ:** ಇದೇ ಸಂದರ್ಭದಲ್ಲಿ ಸಚಿವರು, ಶರಾವತಿ ವಿದ್ಯುದಾಗಾರವನ್ನು 1964ರಲ್ಲಿ ಉದ್ಘಾಟಿಸಿದ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಹಾಗೂ ಸರ್. ಎಂ.ವಿಶ್ವೇಶ್ವರಯ್ಯ ಅವರ ಪುತ್ಥಳಿಗಳನ್ನು ಅನಾವರಣಗೊಳಿಸಿದರು.

ಕಂದಾಯ ಸಚಿವ ಕಾಗೋಡು ತಿಮ್ಮಪ್ಪ, ಕೆಪಿಸಿ ವ್ಯವಸ್ಥಾಪಕ ನಿರ್ದೇಶಕ ಜಿ. ಕುಮಾರ ನಾಯಕ, ತಾಂತ್ರಿಕ ನಿರ್ದೇಶಕ ಭಾಸ್ಕರ್, ಎಲೆಕ್ಟ್ರಿಕಲ್ ವಿಭಾಗದ ಮುಖ್ಯ ಅಧೀಕ್ಷಕ ಆರ್.ವೈ. ಶಿರಾಲಿ, ಕಾಮಗಾರಿ ವಿಭಾಗದ ಮುಖ್ಯ ಅಧೀಕ್ಷಕ ಸಿ.ಎಂ. ದಿವಾಕರ್ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.



ಶರಾವತಿ ವಿದ್ಯುದಾಗಾರದ ನವೀಕೃತ ನಿಯಂತ್ರಣ ಕೇಂದ್ರವನ್ನು ಸಚಿವ ಡಿ.ಕೆ. ಶಿವಕುಮಾರ್ ಉದ್ಘಾಟಿಸಿ, ಮಾಜಿ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿ ಪುತ್ಥಳಿ ಅನಾವರಣಗೊಳಿಸಿದರು. ಸಚಿವ ಕಾಗೋಡು ತಿಮ್ಮಪ್ಪ ಮತ್ತಿತರರು ಹಾಜರಿದ್ದರು.

### ವಿದ್ಯುತ್ ಪ್ರಸರಣ ನಿಗಮ ನೌಕರರಿಗೆ ಬಂಪರ್ ವೇತನ

**ಶಿವಮೊಗ್ಗ:** ವಿದ್ಯುತ್ ಪ್ರಸರಣ ನಿಗಮದ ನೌಕರರಿಗೆ ಶೇ.26ರಷ್ಟು ವೇತನ ಹೆಚ್ಚಳ ಮಾಡಲಾಗುತ್ತಿದ್ದು, ತಕ್ಷಣದಿಂದಲೇ ಜಾರಿಗೆ ಬರಲಿದೆ ಎಂದು ರಾಜ್ಯ ಇಂಧನ ಸಚಿವ ಡಿ.ಕೆ.ಶಿವಕುಮಾರ್ ಘೋಷಿಸಿದರು. ನಗರದ ಮೆಗ್ಗಾನ್ ಆಸ್ಪತ್ರೆ ಆವರಣದಲ್ಲಿ ಮೆಸ್ಕಾಂ ವತಿಯಿಂದ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ಶಂಕುಸ್ಥಾಪನೆ ಮಾಡಿ ಮಾತನಾಡಿ, ಇಷ್ಟು ದೊಡ್ಡ ಮಟ್ಟದಲ್ಲಿ ಮೊದಲ ಬಾರಿಗೆ ವೇತನ ಏರಿಕೆ ಮಾಡಲಾಗುತ್ತಿದೆ. ತಮ್ಮ ಅವಧಿಯಲ್ಲಿ ಇಲಾಖೆಗೆ 735 ಅಧಿಕಾರಿಗಳು ಹಾಗೂ 23 ಸಾವಿರ ಸಿಬ್ಬಂದಿ ನೇಮಕ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು. ಇಂಧನ ಇಲಾಖೆ ಸಶಕ್ತವಾಗಿದ್ದು, ರಾಜ್ಯದಲ್ಲಿ ಎಷ್ಟೇ ಕೈಗಾರಿಕೆಗಳು ಹುಟ್ಟಿಕೊಂಡರೂ ವಿದ್ಯುತ್ ಸರಬರಾಜು ಮಾಡುವ ತಾಕತ್ತು ಇದೆ.

105 ತಾಲೂಕಿನಲ್ಲಿ 20 ಮೆಗಾವ್ಯಾಟ್ ಉತ್ಪಾದಿಸಿ ರೈತರಿಗೆ ನೀಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯದ ವಿದ್ಯುತ್ ಸರಬರಾಜು, ಉತ್ಪಾದನೆಯ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿ ಬೇರೆ ರಾಜ್ಯಗಳೂ ಕರ್ನಾಟಕದ ಹಾದಿ ತುಳಿಯಲು ಮಾರ್ಗದರ್ಶನ ಮಾಡಿದ್ದಾರೆ ಎಂದರು.

---

Vijayavani 3/3/18

### ಬೆಂಗಳೂರು ವಿದ್ಯುತ್ ಸರಬರಾಜು ಮಂಡಳಿ (BESCOM)

> ತಾವರೆಕೆರೆ ಹಾಗೂ ಕುಂಬಳಗೋಡು ದಸ್ತಾಂ ವಿಭಾಗ ಕಛೇರಿ ಕಟ್ಟಡವು ನಿರ್ಮಾಣಗೊಂಡಿದ್ದು, ಕಗ್ಗಲೀಪುರ ಉಪವಿಭಾಗದ ಹಾಗೂ ಹೊಸ ಬೈರೋಹಳ್ಳಿಯಲ್ಲಿ ನೂತನ ಕಟ್ಟಡ ಕಾಮಗಾರಿ ಪ್ರಗತಿಯಲ್ಲಿದೆ.

> ಕೊಡಿಗೇಹಳ್ಳಿ ಗ್ರಾಮದಲ್ಲಿ 66/11 ಕೆ.ವಿ. ಹೊಸ ಕೇಂದ್ರ ಉದ್ಘಾಟಿಸಲಾಗಿದೆ.

> ವೃಷಭಾವತಿ ಉಪಕೇಂದ್ರದಿಂದ ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆಗೆ 66 ಕೆ.ವಿ. ವಿದ್ಯುತ್ ಲೈನ್ ಅಳವಡಿಸಿದ್ದು, ಕೆಂಗೇರಿ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗದಂತೆ ಕ್ರಮ ವಹಿಸಲಾಗಿದೆ.

> ಸೋಮನಹಳ್ಳಿ ಉಪಕೇಂದ್ರದ ಹಳೇ 8 MVA ಪರಿವರ್ತಕದ ಬದಲಾಗಿ ಹೊಸ 20 MVA ಪರಿವರ್ತಕವನ್ನು ಅಳವಡಿಸಲು ಇಲಾಖೆಯಿಂದ ಅನುಮೋದಿಸಿದ್ದು, ಇದರಿಂದ ಕಗ್ಗಲೀಪುರ, ತರಳು, ಅಗರ, ಸೋಮನಹಳ್ಳಿ, ನೆಲಗುಳಿ ಭಾಗದಲ್ಲಿ ಹೆಚ್ಚಿನ ವಿದ್ಯುತ್ ತೊಂದರೆಯಾಗದಂತೆ ಕ್ರಮವಹಿಸಲಾಗಿದೆ.

> 287 ಹೊಸ ವಿದ್ಯುತ್ ಪರಿವರ್ತಕ(TC)ಗಳನ್ನು ಅಳವಡಿಸಿ, ವಿದ್ಯುತ್ ಸಮಸ್ಯೆಯಾಗದಂತೆ ನೋಡಿಕೊಳ್ಳಲಾಗಿದೆ.

> ವಿದ್ಯುತ್ ಬಿಲ್ ಪಾವತಿಗೆ ಅನುಕೂಲವಾಗಲು ಹಾಲಿ 13 ಕೌಂಟರ್‌ಗಳನ್ನು ತೆರೆಸಿದ್ದು, 11(ATP)ಕೇಂದ್ರಗಳನ್ನು ಉದ್ಘಾಟಿಸಲಾಗಿದೆ.

---

V.K. 3/3/18, Page-10

### ಜಿಲ್ಲಾಸ್ಪತ್ರೆಯಲ್ಲಿ ಬೆಂಕಿ: 19 ಶಿಶುಗಳ ರಕ್ಷಣೆ

**ತುಮಕೂರು:** ಜಿಲ್ಲಾಸ್ಪತ್ರೆಯ ನವಜಾತ ಶಿಶುಗಳ ತೀವ್ರ ನಿಗಾ ಘಟಕ (ಎನ್ ಐಸಿಯು)ದಲ್ಲಿ ಶುಕ್ರವಾರ ಸಂಜೆ 7 ಗಂಟೆ ಸಮಯದಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಅಗ್ನಿ ಆಕಸ್ಮಿಕ ಸಂಭವಿಸಿದ್ದು, ನರ್ಸ್ ಚಿಕ್ಕಸಿದ್ದಮ್ಮ ಮತ್ತು ಸಿಬ್ಬಂದಿ ರಮೇಶ್ ಸಮಯ ಪ್ರಜ್ಞೆಯಿಂದ ಎನ್ ಐಸಿಯುನಲ್ಲಿದ್ದ 19 ನವಜಾತ ಶಿಶುಗಳು ಪ್ರಾಣಾಪಾಯದಿಂದ ಪಾರಾಗಿವೆ.

ನವಜಾತ ಶಿಶುಗಳ ಆರೈಕೆಗಾಗಿಯೇ ಇರುವ ಎನ್‌ಐಸಿಯು ಘಟಕದ ಹವಾನಿಯಂತ್ರಕ (ಎ.ಸಿ)ದಲ್ಲಿ ಶಾರ್ಟ್ ಸರ್ಕ್ಯೂಟ್ ಉಂಟಾಗಿದ್ದು, ಕ್ಷಣಾರ್ಧದಲ್ಲಿ ಕೋಣೆಯನ್ನು ಬೆಂಕಿ ಹಾಗೂ ದಟ್ಟ ಹೊಗೆ ಆವರಿಸಿಕೊಂಡಿದೆ. ತಕ್ಷಣ ಎಚ್ಚೆತ್ತ ಸಿಬ್ಬಂದಿ, ಎನ್‌ಐಸಿಯುನ ಕಿಟಕಿ ಗಾಜುಗಳನ್ನು ಒಡೆದು ಹೊಗೆ ಹೊರ ಹೋಗುವಂತೆ ಮಾಡಿದ್ದಾರೆ. ಬಳಿಕ ಮಕ್ಕಳನ್ನು ಹೊರಗೆ ಕರೆದೊಯ್ದು ರಕ್ಷಣೆ ಮಾಡಿದ್ದಾರೆ.

---

Prajavani 3/3/2018

[illegible]

- 9,349 ಮೆಗಾವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಿ, ರಾಷ್ಟ್ರೀಯ ಇಂಧನ ಜಾಲಕ್ಕೆ ಸೇರಿಸಲಾಗಿದೆ. ಇದರಲ್ಲಿ, ನವೀಕೃತ ಇಂಧನ ಮೂಲಗಳಿಂದ ಉತ್ಪಾದಿಸಿದ 5,092 ಮೆಗಾವ್ಯಾಟ್ ವಿದ್ಯುಚ್ಛಕ್ತಿಯೂ ಸೇರಿದೆ; ಇದು ಕರ್ನಾಟಕ ಸರ್ಕಾರದ ಸೌರಶಕ್ತಿ ನೀತಿ, ನವೀಕೃತ ಇಂಧನ ನೀತಿ ಮತ್ತು ಸೂರ್ಯರೈತದಂತಹ ಪ್ರಗತಿಪರ ನೀತಿ ಮತ್ತು ಯೋಜನೆಗಳಿಂದ ಸಾಧ್ಯವಾಗಿದೆ.
- ತುಮಕೂರಿನ ಪಾವಗಡದಲ್ಲಿ 2000 ಮೆಗಾವ್ಯಾಟ್ ಸಾಮರ್ಥ್ಯದ ಪ್ರಪಂಚದ ಅತಿದೊಡ್ಡ ಸೌರಶಕ್ತಿ ಪಾರ್ಕ್ ಸ್ಥಾಪನೆ.
- 139 ಹೊಸ ಮತ್ತು 309 ಮೇಲ್ದರ್ಜೆಗೇರಿಸಲ್ಪಟ್ಟ ಉಪ-ಕೇಂದ್ರಗಳು ಹಾಗೂ 3826 ಸರ್ಕ್ಯೂಟ್ ಕಿ.ಮೀ ಉದ್ದದ ವಿದ್ಯುತ್ ಲೈನ್‌ಗಳ ನಿರ್ಮಾಣದ ಮೂಲಕ ಪ್ರಸರಣ ಜಾಲ ಸಾಮರ್ಥ್ಯದ ಹೆಚ್ಚಳ.

03/03/2018

# ರಾಜ್ಯದ ವಿದ್ಯುತ್ ಸಮಸ್ಯೆ ನಿವಾರಣೆಗೆ ಅಗತ್ಯ ಕ್ರಮ

[redacted]

ರಾಜ್ಯದಲ್ಲಿ ವಿದ್ಯುತ್ ಬೇಡಿಕೆಗೆ ಅನುಗುಣವಾಗಿ ಸಮರ್ಪಕವಾಗಿ ಹಾಗೂ ನಿರಂತರವಾಗಿ ಪೂರೈಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ರಾಜ್ಯ ಇಂಧನ ಸಚಿವ ಡಿ.ಕೆ. ಶಿವಕುಮಾರ್ ಹೇಳಿದರು.

ಶುಕ್ರವಾರ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು ಶಿವಮೊಗ್ಗ ಸಮೀಪದ ಸಂತೇಕಡೂರಿನಲ್ಲಿ ನೂತನವಾಗಿ ನಿರ್ಮಿಸಲಿರುವ 66/11 ಕೆ.ವಿ. ಸಾಮರ್ಥ್ಯದ ವಿದ್ಯುತ್ ಉಪಕೇಂದ್ರಕ್ಕೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದರು.

ಟ್ರಾನ್ಸ್‌ಫರ್ಮರ್‌ಗಳನ್ನು ದುರಸ್ತಿ ಮಾಡಬೇಕಾದ ಸಂದರ್ಭ ಎದುರಾದಲ್ಲಿ ದೂರು ದಾಖಲಾದ ಕೇವಲ 3 ದಿನಗಳಲ್ಲಿ ದುರಸ್ತಿಗೆ ಕ್ರಮ ಕೈಗೊಳ್ಳಲಾಗುವುದು. ತಪ್ಪಿದಲ್ಲಿ ಪರಿಶೀಲಿಸಿ ಸಂಬಂಧಿಸಿದ ಅಧಿಕಾರಿಗಳಿಂದ ದಿನಪ್ರತಿ ನಿಗದಿಪಡಿಸಿದ ರೀತಿಯಲ್ಲಿ ದಂಡವನ್ನು ರೈತರಿಗೆ ಪಾವತಿಸುವ ಕಠಿಣ ಕಾನೂನನ್ನು ಜಾರಿಗೆ ತರಲಾಗಿದೆ. ಇದರಿಂದಾಗಿ ಸಹಾಯವಾಣಿಗೆ ಕರೆಮಾಡಿ ಗ್ರಾಹಕರು ತ್ವರಿತ ಸೇವೆಯನ್ನು ಪಡೆಯಬಹುದಾಗಿದೆ ಎಂದರು.

ರಾಜ್ಯದ ಆಯ್ದ 100 ತಾಲೂಕುಗಳಲ್ಲಿ 20 ಮೆ.ವ್ಯಾ. ಸಾಮರ್ಥ್ಯದ ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಿ, ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ 6 ಗಂಟೆಗಳ ಮಾತ್ರ ನೀಡಲಾಗುತ್ತಿದ್ದ ವಿದ್ಯುತ್‌ನ್ನು 7 ಗಂಟೆಗಳಿಗೆ ವಿಸ್ತರಿಸಲಾಗಿದೆ ಎಂದರು.

ರಾಜ್ಯದ ಪ್ರತಿ ಜಿಲ್ಲೆಗೆ 50 ಸೋಲಾರ್ ಪಂಪ್‌ಸೆಟ್‌ಗಳನ್ನು ವಿತರಿಸಲು ಉದ್ದೇಶಿಸಲಾಗಿದೆ. ಪ್ರತಿ ಸೋಲಾರ್ ಘಟಕಕ್ಕೆ 4.50 ಲಕ್ಷ ರೂ.ಗಳಾಗಿದ್ದು, ಫಲಾನುಭವಿಯು 50 ಸಾವಿರ ರೂ.ಗಳನ್ನು ಮುಂಗಡವಾಗಿ ಪಾವತಿಸಬೇಕಾಗುವುದು. ಒಣಭೂಮಿ ವ್ಯವಸಾಯಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಪ್ರತಿ ಹೆಕ್ಟೇರ್‌ಗೆ 5 ಸಾವಿರ ರೂ. ಹಾಗೂ ಎರಡು ಹೆಕ್ಟೇರ್‌ಗೆ 10 ಸಾವಿರ ರೂ.ಗಳ ಸಹಾಯಧನ ನೀಡಲಾಗುವುದು. ಈ ಯೋಜನೆಯನ್ನು ಪ್ರಸಕ್ತ ಬಜೆಟ್‌ನಲ್ಲಿ ಮಂಡಿಸಿ ಅನುಮೋದನೆ ಪಡೆಯಲಾಗಿದೆ ಎಂದರು.

---

V.V

# ವಿದ್ಯುತ್ ನಿಗಮ ಸಿಬ್ಬಂದಿಗೆ ಬಂಪರ್

**ಶಿವಮೊಗ್ಗ:** ಕರ್ನಾಟಕ ವಿದ್ಯುತ್ ನಿಗಮದ ನೌಕರರಿಗೆ ಶೇ.26ರಷ್ಟು ವೇತನ ಹೆಚ್ಚಳ ಮಾಡಲು ನಿರ್ಧರಿಸಿರುವ ರಾಜ್ಯ ಸರ್ಕಾರ ಮಾ.3ರಂದು ಅಧಿಕೃತ ಆದೇಶ ಹೊರಡಿಸಲಿದೆ ಎಂದು ಇಂಧನ ಸಚಿವ ಡಿ.ಕೆ.ಶಿವಕುಮಾರ್ ಘೋಷಿಸಿದ್ದಾರೆ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಿಂದ ವಿದ್ಯುತ್ ವಿತರಣಾ ಕೇಂದ್ರದ ಶಿವಮೊಗ್ಗ ವಲಯ ಕಚೇರಿ ಮತ್ತು ಇತರೆ ಕಟ್ಟಡಗಳ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು ನಿಗಮದ ನೌಕರರಿಗೆ ಹೊಸ ವೇತನ ಪರಿಷ್ಕರಣೆ ಜಾರಿಗೊಳ್ಳಲಿದೆ ಎಂದರು. ಕೆಪಿಟಿಸಿಎಲ್‌ನಲ್ಲಿ ಅಂದಾಜು 50 ಸಾವಿರ ಸಿಬ್ಬಂದಿಯಿದ್ದಾರೆ. ಶನಿವಾರದಿಂದಲೇ ವೇತನ ಹೆಚ್ಚಳ ಆದೇಶ ಜಾರಿಗೊಳಿಸುತ್ತಿರುವ ಬಗ್ಗೆ ನೌಕರರು ಸಂತಸ ವ್ಯಕ್ತಪಡಿಸಿದ್ದಾರೆ.

**» 50 ಸಾವಿರ ಸಿಬ್ಬಂದಿಗೆ ಅನ್ವಯ**

---

# 19 ನವಜಾತ ಶಿಶುಗಳು ಪ್ರಾಣಾಪಾಯದಿಂದ ಪಾರು

**ತುಮಕೂರು:** ತುಮಕೂರು ಜಿಲ್ಲಾಸ್ಪತ್ರೆಯ ನವಜಾತ ಶಿಶುಗಳ ತೀವ್ರ ನಿಗಾ ಘಟಕ (ಎನ್ಐಸಿಯು)ದಲ್ಲಿ 6:30ರ ಸುಮಾರಿಗೆ ಆಕಸ್ಮಿಕ ಬೆಂಕಿ ಕಾಣಿಸಿಕೊಂಡಿದೆ, ಅಲ್ಲಿನ ನರ್ಸ್ ಚಿಕ್ಕಸಿದ್ದಮ್ಮ, ಬ್ರದರ್ ರಮೇಶ್ ಅವರ ಸಮಯ ಪ್ರಜ್ಞೆಯಿಂದ ಎನ್‌ಐಸಿಯುನಲ್ಲಿದ್ದ 19 ನವಜಾತ ಶಿಶುಗಳು ಪ್ರಾಣಾಪಾಯದಿಂದ ಪಾರಾಗಿವೆ.

ನವಜಾತ ಶಿಶುಗಳ ಆರೈಕೆಗಾಗಿಯೇ ಇರುವ ಎನ್‌ಐಸಿಯು ಘಟಕದ ಹವಾನಿಯಂತ್ರಕದಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿದೆ. ನರ್ಸ್ ಹಾಗೂ ಅಲ್ಲಿನ ಸಿಬ್ಬಂದಿಯ ಸಮಯ ಪ್ರಜ್ಞೆಯಿಂದ 19 ಮಕ್ಕಳು ಬದುಕುಳಿದಿವೆ. ಎನ್‌ಐಸಿಯುನ ಕಿಟಕಿ ಗಾಜುಗಳನ್ನು ಹೊಡೆದು ವೈದ್ಯಕೀಯ ಸಿಬ್ಬಂದಿ ನವಜಾತ ಶಿಶುಗಳನ್ನು ತಕ್ಷಣ ಸ್ಥಳಾಂತರ ಮಾಡಿ ದ್ದಾರೆ. ಜೊತೆಗೆ ನೀರು ಹಾಗೂ ಇತರೆ ವಸ್ತುಗಳಿಂದ ಬೆಂಕಿ ನಂದಿಸಲು ಪ್ರಯತ್ನಿಸಿದ್ದಾರೆ. ತಕ್ಷಣ ಸ್ಥಳಕ್ಕೆ ದೌಡಾಯಿಸಿದ ಶಂಕರ್ ನೇತೃತ್ವದ ಅಗ್ನಿಶಾಮಕ ಸಿಬ್ಬಂದಿ ಸಂಪೂರ್ಣವಾಗಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಘಟನಾ ಸ್ಥಳಕ್ಕೆ ಜಿಲ್ಲಾಧಿಕಾರಿ ಕೆ.ಪಿ.ಮೋಹನ್ ರಾಜ್, ನಗರ ಶಾಸಕ ಡಾ.ರಫೀಕ್ ಅಮಹದ್, ಎಸ್‌ಪಿ ಡಾ.ದಿವ್ಯ ಗೋಪಿನಾಥನ್, ಎಎಸ್‌ಪಿ ಶೋಭಾರಾಣಿ, ಸಿಪಿಐಗಳಾದ ಚಂದ್ರಶೇಖರ್, ರಾಧಾಕೃಷ್ಣ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ವೀರಭದ್ರಯ್ಯ ಸೇರಿದಂತೆ ಇತರೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸುವುದರ ಜೊತೆಗೆ ನವಜಾತಶಿಶುಗಳ ಪೋಷಕರಿಗೆ ಸಾಂತ್ವನ ಹೇಳಿದರು.

---

# ಇಂಧನ ಇಲಾಖೆ ನೌಕರರಿಗೆ 26% ವೇತನ ಹೆಚ್ಚಳ: ಡಿಕೆಶಿ

• **ಕನ್ನಡಪ್ರಭ ವಾರ್ತೆ** ಶಿವಮೊಗ್ಗ

ಇಂಧನ ಇಲಾಖೆ ನೌಕರರಿಗೆ ಶೇ.26ರಷ್ಟು ವೇತನದಲ್ಲಿ ಹೆಚ್ಚಳ ಮಾಡಲು ನಿರ್ಧಾರ ಕೈಗೊಳ್ಳಲಾಗಿದೆ. ಶನಿವಾರ ಈ ಕುರಿತ ಒಪ್ಪಂದಕ್ಕೆ ಸಹಿ ಹಾಕಲಿದ್ದೇನೆ ಎಂದು ಇಂಧನ ಸಚಿವ ಡಿ.ಕೆ.ಶಿವಕುಮಾರ್ ಹೇಳಿದರು.

ಹಲವು ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿದ ಅವರು, ಶಿಫಾರಸಿಲ್ಲದೆ, ಹಣ ಪಡೆಯದೇ ಭರ್ತಿ ಮಾಡಿದ್ದೇವೆ. ರಾಜ್ಯಾದ್ಯಂತ 23,000 ಮಂದಿಗೆ ಮನೆ ಬಾಗಿಲಿಗೆ ನೇಮಕ ಪತ್ರ ತಲುಪಿದೆ. ಇನ್ನಷ್ಟು ಮಂದಿ ನೇಮಕ ಮಾಡಿಕೊಳ್ಳಬೇಕಿತ್ತು. ಆರ್ಥಿಕ ಹೊರೆ ಕಾರಣ ಮಾಡಲಾಗಲಿಲ್ಲ ಎಂದರು.

ಸಿಎಂ ಸಿದ್ದರಾಮಯ್ಯ ಅವರು ಈ ಇಲಾಖೆ ಜವಾಬ್ದಾರಿ ಕೊಟ್ಟಾಗ ಹಲವರು ಕಷ್ಟವಾದ ಇಲಾಖೆ, ವಿದ್ಯುತ್ ಕೊಡೋಕೆ ಆಗೋಲ್ಲ, ಜನ ಬಯ್ತಾರೆ, ವಹಿಸಿಕೊಳ್ಳಬೇಡಿ ಎಂದರು. ಆದರೆ, ನಾನು ಹೆದರಿ ಓಡಲಿಲ್ಲ, ಜವಾಬ್ದಾರಿ ತೆಗೆದುಕೊಂಡೆ. ಬದುಕಿದ್ದಾಗ ಏನಾದರೂ ಸಾಧನೆ ಮಾಡಬೇಕಲ್ಲವೇ ಎಂದರು.

ವಿಜಯವಾಣಿ 3/3/18

# ಬೆಂಗಳೂರಿಗೆ ಶರಾವತಿ ನದಿ ನೀರಿಲ್ಲ

## ಸಚಿವ ಡಿ.ಕೆ.ಶಿವಕುಮಾರ್ ಸ್ಪಷ್ಟನೆ | ನವೀಕೃತ ವಿದ್ಯುದಾಗಾರ ಉದ್ಘಾಟನೆ

■ **ವಿಜಯವಾಣಿ ಸುದ್ದಿಜಾಲ** ಸಾಗರ

ಅರಬ್ಬಿ ಸಮುದ್ರ ಸೇರುತ್ತಿರುವ ಶರಾವತಿ ನದಿ ನೀರನ್ನು ಬೆಂಗಳೂರಿಗೆ ತೆಗೆದುಕೊಂಡು ಹೋಗುವ ಪ್ರಸ್ತಾವ ನಮ್ಮ ಮುಂದಿಲ್ಲ ಎಂದು ಇಂಧನ ಸಚಿವ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದರು.

ಜೋಗದಲ್ಲಿ ಶುಕ್ರವಾರ ಶರಾವತಿ ಯೋಜನೆಯ 1,035 ಮೆಗಾವಾಟ್ ನವೀಕೃತ ಶರಾವತಿ ವಿದ್ಯುದಾಗಾರ ಲೋಕಾರ್ಪಣೆಗೊಳಿಸಿ, ಮಾಜಿ ಪ್ರಧಾನಿ ಲಾಲ್‌ಬಹದ್ದೂರ್ ಶಾಸ್ತ್ರಿ ಮತ್ತು ಸರ್ ಎಂ.ವಿಶ್ವೇಶ್ವರಯ್ಯ ಅವರ ಪುತ್ಥಳಿ ಅನಾವರಣ ಗೊಳಿಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

**» ವಿದ್ಯುತ್ ಸಮಸ್ಯೆ ಎದುರಿಸಲು ಸರ್ಕಾರ ಸಜ್ಜು**

ನಮ್ಮ ಹಿರಿಯರು ಮಾಡಿರುವ ಈ ಘಟಕವನ್ನು ಹಾಗೂ ಇಲ್ಲಿನ ಪ್ರಕೃತಿ ಸಂಪನ್ಮೂಲವನ್ನು ಇಲ್ಲಿಯೇ ಸದ್ಬಳಕೆ ಮಾಡುವ ಚಿಂತನೆ ನಮ್ಮದು. ಮುಂದಿನ ವರ್ಷದಿಂದ ನಿಗಮದ ಫೌಂಡೇಶನ್ ದಿನವನ್ನು ರಾಜ್ಯದ ಬೇರೆ ಬೇರೆ ಕಡೆಯ ವಿದ್ಯುದಾಗಾರಗಳಲ್ಲಿ ನಡೆಸಲು ಚಿಂತನೆ ನಡೆಸಲಾಗಿದೆ ಎಂದರು. ಎಂತಹ ಪರಿಸ್ಥಿತಿಯಲ್ಲೂ ಈ ಬಾರಿ ರಾಜ್ಯಕ್ಕೆ ವಿದ್ಯುತ್ ಬರ ಬರುವುದಿಲ್ಲ. ವಿದ್ಯುತ್ ಸಮಸ್ಯೆ ಎದುರಿಸಲು ಎಲ್ಲ ರೀತಿಯಲ್ಲೂ ರಾಜ್ಯ ಸರ್ಕಾರ ಸಜ್ಜಾಗಿದೆ. ಕಳೆದ ಬಾರಿ ನಾವು ನಿರೀಕ್ಷೆ ಮಾಡಿದಷ್ಟು ಮಳೆ ಬಂದಿಲ್ಲ. ಲಿಂಗನಮಕ್ಕಿ ಅಣೆಕಟ್ಟು ಭರ್ತಿಯಾಗಿರಲಿಲ್ಲ. ಆದರೂ ಶೇ.60 ನೀರನ್ನು ಸಂಗ್ರಹಿಸಿಟ್ಟುಕೊಳ್ಳಲಾಗಿದ್ದು, ಮುಂದಿನ ದಿನಗಳಲ್ಲಿ ಬೇಕಾದ ವಿದ್ಯುತ್ತನ್ನು ಉತ್ಪಾದನೆ ಮಾಡಿ ರಾಜ್ಯಕ್ಕೆ ಸರಬರಾಜು ಮಾಡಲಾಗುತ್ತದೆ. ಇದರ ಜತೆಗೆ 4.08 ರೂ. ದರದಲ್ಲಿ ವಿದ್ಯುತ್ ಖರೀದಿಗೆ ಚಿಂತನೆ ನಡೆಸಲಾಗಿದೆ. ಡಿಸೆಂಬರ್‌ನೊಳಗೆ ವಿದ್ಯುತ್ ಸ್ವಾವಲಂಬಿ ರಾಜ್ಯವಾಗಿ ಹೊರಹೊಮ್ಮಲಿದೆ ಎಂದರು.

ಕಂದಾಯ ಸಚಿವ ಕಾಗೋಡು ತಿಮ್ಮಪ್ಪ, ನಿಗಮದ ವ್ಯವಸ್ಥಾಪಕ ನಿರ್ದೇಶಕ ಜಿ.ಕುಮಾರ ನಾಯ್ಕ, ತಾಂತ್ರಿಕ ನಿರ್ದೇಶಕ ಭಾಸ್ಕರರಾವ್, ಕಾರ್ಯನಿರ್ವಾಹಕ ನಿರ್ದೇಶಕಿ ಜಿ.ರತ್ನಮ್ಮ, ತಾಪಂ ಅಧ್ಯಕ್ಷ ಮಲ್ಲಿಕಾರ್ಜುನ ಹಕ್ರೆ ಇತರರಿದ್ದರು.



ಜೋಗದಲ್ಲಿ ನವೀಕೃತ ಶರಾವತಿ ವಿದ್ಯುದಾಗಾರವನ್ನು ಸಚಿವ ಡಿ.ಕೆ.ಶಿವಕುಮಾರ್ ಲೋಕಾರ್ಪಣೆ ಮಾಡಿದರು.

### ಎರಡು ಹೊಸ ಕಾರ್ಯಯೋಜನೆ

**ಲಿಂಗನಮಕ್ಕಿ ಅಣೆಕಟ್ಟಿನ ತಲಕಳಲೆ ಡ್ಯಾಂ ಬಳಿ ಮತ್ತು ಶಿವನಸಮುದ್ರದಲ್ಲಿ 2 ಸಾವಿರ ಮೆವ್ಯಾ ಸಾಮರ್ಥ್ಯದ ವಿದ್ಯುತ್ ಉತ್ಪಾದನಾ ಘಟಕ ನಿರ್ಮಿಸುವ ನಿಟ್ಟಿನಲ್ಲಿ ಕಾರ್ಯಯೋಜನೆ ರೂಪಿಸಲಾಗಿದೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.**

## ನೌಕರರ ವೇತನ ಶೇ.26 ಹೆಚ್ಚಳ

**ಶಿವಮೊಗ್ಗ:** ಚುನಾವಣೆ ಹೊಸ್ತಿಲಲ್ಲಿರುವ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ರಾಜ್ಯ ಸರ್ಕಾರಿ ನೌಕರರಿಗೆ 6ನೇ ವೇತನ ಆಯೋಗ ಜಾರಿಗೊಳಿಸಿದ ಬೆನ್ನಲ್ಲೇ ಇಂಧನ ಸಚಿವ ಡಿ.ಕೆ.ಶಿವಕುಮಾರ್ ಕೂಡ ಕರ್ನಾಟಕ ವಿದ್ಯುತ್ ನಿಗಮದ ನೌಕರರಿಗೆ ಶೇ.26 ವೇತನ ಹೆಚ್ಚಿಸಲು ನಿರ್ಧರಿಸಿದ್ದು, ಮಾ.3ರಂದು ಅಧಿಕೃತ ಆದೇಶ ಹೊರಡಿಸುವುದಾಗಿ ಘೋಷಿಸಿದರು. ನಗರದ ಮೆಗ್ಗಾನ್ ಆಸ್ಪತ್ರೆ ಆವರಣದಲ್ಲಿ ಶುಕ್ರವಾರ ಕೆಪಿಸಿ ವಿದ್ಯುತ್ ವಿತರಣಾ ಕೇಂದ್ರದ ಶಿವಮೊಗ್ಗ ವಲಯ ಕಚೇರಿ ಶಂಕುಸ್ಥಾಪನೆ ನೆರವೇರಿಸಿ ಈ ವಿಷಯ ತಿಳಿಸಿದರು.

**» ಇಂದು ಅಧಿಕೃತ ಆದೇಶ**

ಅಂಥ ಪರಿಸ್ಥಿತಿ ಇಲ್ಲ ಎನ್ನುತ್ತಿದೆ ಕೇಂದ್ರ ಸರ್ಕಾರ

# ದೇಶದಲ್ಲಿ ಕಲ್ಲಿದ್ದಲು ಕೊರತೆ?

- ಕಲ್ಲಿದ್ದಲಿಗೆ ಕೊರತೆಯಿಲ್ಲ, ಸಾಗಣೆಗಷ್ಟೇ ಸಮಸ್ಯೆ ಎಂದ ಕಲ್ಲಿದ್ದಲು ಕಾರ್ಯದರ್ಶಿ
- ಪರಿಸ್ಥಿತಿ ಮೇಲೆ ನಿಗಾ ಇರಿಸಿದ್ದೇವೆ: ಕೇಂದ್ರ ಕಲ್ಲಿದ್ದಲು ಸಚಿವಾಲಯ

**ನವದೆಹಲಿ:** ದೇಶದ ವಿವಿಧ ಭಾಗಗಳಲ್ಲಿ ಬೇಸಿಗೆಯ ಪ್ರಭಾವ ಕಾಣಿಸಿಕೊಳ್ಳಲಾರಂಭಿಸಿದೆ. ಅದಕ್ಕೆ ಪೂರಕವಾಗಿ ದೇಶದ ವಿದ್ಯುತ್ ಉತ್ಪಾದನಾ ಸ್ಥಾವರಗಳಲ್ಲಿ ಕಲ್ಲಿದ್ದಲು ಕೊರತೆ ಉಂಟಾಗಿದೆ. ಅದರಲ್ಲೂ ಕೆಲ ವಿದ್ಯುತ್ ಸ್ಥಾವರಗಳಲ್ಲಿ ಕೇವಲ ಒಂದು ದಿನಕ್ಕೆ ಬೇಕಾಗುವಷ್ಟು ಮಾತ್ರ ಕಲ್ಲಿದ್ದಲು ಇದೆ ಎಂದು 'ದ ಇಕನಾಮಿಕ್ ಟೈಮ್ಸ್' ವರದಿ ಮಾಡಿದೆ.

ಆದರೆ ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಕೇಂದ್ರ ಕಲ್ಲಿದ್ದಲು ಸಚಿವಾಲಯ, ಅಂಥ ಪರಿಸ್ಥಿತಿಯೇ ಉದ್ಭವಿಸಿಲ್ಲ ಎಂದು ಹೇಳಿದೆ. ಇಂಧನ, ಕಲ್ಲಿದ್ದಲು ಮತ್ತು ರೈಲ್ವೆ ಸಚಿವಾಲಯ ಪರಿಸ್ಥಿತಿ ಮೇಲೆ ನಿಗಾ ಇರಿಸಿದೆ ಎಂದೂ ಸಚಿವಾಲಯ ಹೇಳಿದೆ.

ಈ ಕುರಿತು ಶುಕ್ರವಾರ ಪ್ರತಿಕ್ರಿಯಿಸಿರುವ ಇಂಧನ ಖಾತೆ ಕಾರ್ಯದರ್ಶಿ ಅಜಯ ಕುಮಾರ್ ಭಲ್ಲಾ, '11 ವಿದ್ಯುತ್ ಸ್ಥಾವರಗಳಲ್ಲಿ ಒಂದು ವಾರಕ್ಕೆ ಸಾಕಾಗುವಷ್ಟು ಕಲ್ಲಿದ್ದಲು ಸಂಗ್ರಹ ಇದೆ. 14 ಸ್ಥಾವರಗಳಲ್ಲಿ ಕೇವಲ ನಾಲ್ಕು ದಿನಗಳಿಗೆ ಆಗುವಷ್ಟು ಮಾತ್ರ ಇದೆ' ಎಂದಿದ್ದಾರೆ. ಆದರೆ ಕಲ್ಲಿದ್ದಲು ಖಾತೆ ಕಾರ್ಯದರ್ಶಿ ಸುಶೀಲ್ ಕುಮಾರ್, 'ದೇಶದಲ್ಲಿ ಕಲ್ಲಿದ್ದಲು ಕೊರತೆ ಎದುರಾಗಿಲ್ಲ, ಹೀಗಾಗಿ ಗೊಂದಲ ಅಥವಾ ಭೀತಿಯ ಅಗತ್ಯವಿಲ್ಲ. ಕಲ್ಲಿದ್ದಲು ಸಾಗಿಸಲು ರೈಲು ರೇಕ್‌ಗಳ ಕೊರತೆ ಉಂಟಾಗಿದೆಯಷ್ಟೆ. 68.69 ದಶಲಕ್ಷ ಟನ್‌ಗಳಷ್ಟು ಕಲ್ಲಿದ್ದಲನ್ನು ಈ ಹಣಕಾಸು ವರ್ಷದ ಆರಂಭದಲ್ಲಿಯೇ ಉತ್ಪಾದಿಸಿದ್ದೇವೆ. ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಕನಿಷ್ಠ ಸಂಗ್ರಹ ಎಂದರೆ 7.3 ದಶಲಕ್ಷ ಟನ್‌ಗಳಿಗೆ ತಗ್ಗಿತ್ತು ಎಂದಿದ್ದಾರೆ.

---

ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷರ ಹೇಳಿಕೆ

ಏಪ್ರಿಲ್ ತಿಂಗಳಿನಿಂದ ನಿತ್ಯ ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ರೈತರಿಗೆ ವಿದ್ಯುತ್ ಒದಗಿಸಲು ನಿರ್ಧರಿಸಲಾಗಿದೆ

# ರೈತರ ಪಂಪ್‌ಸೆಟ್‌ಗಳಿಗೆ ಹಗಲಿನಲ್ಲಿ ವಿದ್ಯುತ್ ಪೂರೈಕೆ

**ಮಂಗಳೂರು:** ರಾಜ್ಯದಾದ್ಯಂತ ರೈತರ ಪಂಪ್‌ಸೆಟ್‌ಗಳಿಗೆ ಹಗಲು ಹೊತ್ತಿನಲ್ಲಿ ವಿದ್ಯುತ್ ಪೂರೈಸಲು ಆಯೋಗವು ನಿರ್ಧರಿಸಿದ್ದು, ಏಪ್ರಿಲ್‌ನಿಂದ ಇದು ಜಾರಿಗೆ ಬರಲಿದೆ ಎಂದು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಧ್ಯಕ್ಷ ಶಂಕರಲಿಂಗೇಗೌಡ ತಿಳಿಸಿದರು.

ನಗರದಲ್ಲಿ ಶುಕ್ರವಾರ ವಿದ್ಯುತ್ ದರ ಪರಿಷ್ಕರಣೆಗೆ ಸಂಬಂಧಿಸಿದಂತೆ ಸಾರ್ವಜನಿಕ ವಿಚಾರಣಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾತ್ರಿ ವೇಳೆ ವಿದ್ಯುತ್ ಪೂರೈಕೆ ಮಾಡುವುದರಿಂದ ರೈತರಿಗೆ ತೊಂದರೆ ಆಗುತ್ತಿದೆ ಎಂದು ದೂರುಗಳು ಕೇಳಿ ಬಂದಿದ್ದವು. ಇದೀಗ ಹಗಲಿನಲ್ಲಿ ಸೌರ ವಿದ್ಯುತ್ ಉತ್ಪಾದನೆ ಹೆಚ್ಚಾಗುತ್ತಿದ್ದು, ಅದನ್ನು ಆಯಾ ಪ್ರದೇಶಗಳಲ್ಲಿಯೇ ಬಳಕೆ ಮಾಡಲು ಚಿಂತನೆ ನಡೆಸಲಾಗುತ್ತಿದೆ ಎಂದರು.

1 ಲಕ್ಷ ಯೂನಿಟ್‌ಗಿಂತ ಹೆಚ್ಚು ವಿದ್ಯುತ್ ಬಳಕೆ ಮಾಡುವವರಿಗೆ ದರದಲ್ಲಿ ಸ್ವಲ್ಪ ರಿಯಾಯಿತಿ ನೀಡುವಂತೆ ಕೋರಿಕೆ ಬಂದಿದೆ. ಒಂದು ವೇಳೆ ಇದನ್ನು ನಿರ್ಲಕ್ಷಿಸಿದಲ್ಲಿ, ಆ ಗ್ರಾಹಕರು ಬೇರೆ ವಿದ್ಯುತ್ ಖರೀದಿಗೆ ಮುಂದಾಗಬಹುದು. ಹೀಗಾಗಿ ಅಂತಹ ಗ್ರಾಹಕರನ್ನು ಹಿಡಿದಿಟ್ಟುಕೊಳ್ಳುವ ನಿಟ್ಟಿನಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದರು.

---

# ಪ್ರಾಣಾಪಾಯದಿಂದ ಪಾರಾದ ಹಸುಗೂಸುಗಳು

**ಸಂ.ಕ.ಸಮಾಚಾರ, ತುಮಕೂರು**

ಇಲ್ಲಿನ ಸಾರ್ವಜನಿಕ ಆಸ್ಪತ್ರೆಯ ಮಕ್ಕಳ ರಕ್ಷಣಾ ಘಟಕದಲ್ಲಿ ಆಕಸ್ಮಿಕ ಬೆಂಕಿ ಉಂಟಾಗಿ ಒಟ್ಟು 29 ಮಕ್ಕಳು ಯಾವುದೇ ಪ್ರಾಣಾಪಾಯವಿಲ್ಲದೆ ಪಾರಾದ ಘಟನೆ ಶುಕ್ರವಾರ ಸಂಜೆ 6. 30ರ ವೇಳೆಯಲ್ಲಿ ನಡೆಯಿತು.

ಆಸ್ಪತ್ರೆಯಲ್ಲೇ ಹುಟ್ಟುವ ಮಕ್ಕಳಿಗೆ ಮತ್ತು ಮನೆಗಳಲ್ಲೇ ಹುಟ್ಟಿದ ಮಕ್ಕಳಿಗೆಂದು ಪ್ರತ್ಯೇಕ ರಕ್ಷಣಾ ಘಟಕವಿದೆ. ಈ ಘಟಕದ ವಾತಾನುಕೂಲದಲ್ಲಿ (ಎಸಿ) ಆಕಸ್ಮಿಕವಾಗಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಉಂಟಾಗಿದ್ದರಿಂದ ಬೆಂಕಿ, ಹೊಗೆ ಕಾಣಿಸಿಕೊಂಡಿತು. ಸಂದ್ದಿಗಾರರೊಂದಿಗೆ ತಕ್ಷಣವೇ ನರ್ಸ್‌ಗಳು ಮಕ್ಕಳು ಮತ್ತು ತಾಯಂದಿರನ್ನು ಕಟ್ಟಡದಿಂದ ಹೊರಕ್ಕೆ ತಂದರು.

ಸುದ್ದಿ ತಿಳಿದ ಅಗ್ನಿಶಾಮಕ ದಳ ಕ್ಷಣಾರ್ಧದಲ್ಲಿ ಆಗಮಿಸಿ, ಬೆಂಕಿಯನ್ನು ನಂದಿಸಿತು. ಶಾಸಕ ಡಾ.ರಫೀಕ್ ಅಹಮದ್, ಪೊಲೀಸ್ ಮುಖ್ಯಾಧಿಕಾರಿ ಡಾ.ದಿವ್ಯಾ ಗೋಪಿನಾಥ್, ಹೆಚ್ಚುವರಿ ಎಸ್ಪಿ ಶೋಭಾರಾಣಿ ಸ್ಥಳಕ್ಕೆ ಆಗಮಿಸಿ, ತಾಯಂದಿರಿಗೆ ಧೈರ್ಯ ತುಂಬಿದರು.

ಜಿಲ್ಲಾಧಿಕಾರಿ ಮೋಹನರಾಜ್ ಎಲ್ಲವನ್ನು ಪರಿಶೀಲಿಸಿದ ನಂತರ ಮಾತನಾಡಿ, ಮಕ್ಕಳ ರಕ್ಷಣಾ ಘಟಕದಲ್ಲಿ ಒಟ್ಟು 29 ಮಕ್ಕಳು ಇದ್ದು, ಯಾವುದೇ ತೊಂದರೆ ಆಗಿಲ್ಲ. ಈ ಘಟನೆ ಹೇಗೆ ನಡೆಯಿತು ಎಂದು ತನಿಖೆ ಮಾಡಿ, ವರದಿ ಸಲ್ಲಿಸುವಂತೆ ಬೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ.ವೀರಭದ್ರಯ್ಯ ಮಾತನಾಡಿ, ಮಕ್ಕಳಿಗೆ ಯಾವುದೇ ರೀತಿಯ ತೊಂದರೆ ಆಗಿಲ್ಲ. ಮಕ್ಕಳನ್ನು ಶ್ರೀದೇವಿ ಮತ್ತು ಸಿದ್ಧಾರ್ಥ ವೈದ್ಯಕೀಯ ಕಾಲೇಜುಗಳಿಗೆ ಸ್ಥಳಾಂತರ ಮಾಡಲಾಗುತ್ತದೆ ಎಂದರು.

---

# ಕೆಪಿಸಿಎಲ್ ನೌಕರರ ವೇತನ ಶೇ.26 ಹೆಚ್ಚಳ

**ಶಿವಮೊಗ್ಗ:** ರಾಜ್ಯ ವಿದ್ಯುತ್ ಪ್ರಸರಣ ನಿಗಮದ ನೌಕರರ ವೇತನವನ್ನು ಶೇ. 26ರಷ್ಟು ಹೆಚ್ಚಳ ಮಾಡಲಾಗುವುದು ಎಂದು ಇಂಧನ ಸಚಿವ ಡಿ.ಕೆ. ಶಿವಕುಮಾರ್ ಘೋಷಿಸಿದರು. ವಿದ್ಯುತ್ ವಿತರಣಾ ಕೇಂದ್ರ ಶಿವಮೊಗ್ಗ ವಲಯ ಕಚೇರಿ ಮತ್ತು ಇತರ ಕಟ್ಟಡಗಳ ಉದ್ಘಾಟನೆ ಮತ್ತು ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಿ ಮಾತನಾಡಿ, ರಾಜ್ಯ ವಿದ್ಯುತ್ ಪ್ರಸರಣ ನಿಗಮದ ನೌಕರರ ವೇತನವನ್ನು ಶೇ. 26ರಷ್ಟು ಹೆಚ್ಚಳ ಮಾಡಲಾಗಿದೆ. ಇಂಧನ ಇಲಾಖೆ ಜವಾಬ್ದಾರಿ ವಹಿಸಿಕೊಂಡ ನಂತರ 23 ಸಾವಿರ ಖಾಲಿ ಇದ್ದ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಇನ್ನು 17 ಸಾವಿರ ಹುದ್ದೆ ಖಾಲಿ ಇದ್ದು, ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು ಎಂದರು.